# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.47 | ENGLISH DAILY | Subscription Yearly - Rs. - | WEDNESDAY | 23-2-2022



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ಬ್ಯಾಡಗಿ ಮಾರುಕಟ್ಟೆಗೆ ದಾಖಲೆ ಕೆಂಪು ಮೆಣಸಿನ ಕಾಯಿ ಆವಕ

ಬ್ಯಾಡಗಿ ಎಪಿಎಂಸಿಗೆ ದಾಖಲೆ ಪ್ರಮಾಣದ 245171 ಚೀಲ ಒಣ ಕೆಂಪು ಮೆಣಸಿನಕಾಯಿ ಆವಕವಾಗಿದೆಯೆನ್ನಲಾಗಿದೆ. ಹಿಂದಿನ ವರ್ಷ 2.28 ಲಕ್ಷ ಚೀಲಗಳು ಇದುವರೆಗಿನ ಅತಿ ಹೆಚ್ಚು ಆವಕದ ದಾಖಲೆಯಾಗಿತ್ತೆನ್ನಲಾಗಿದೆ. ಆವಕ ಹೆಚ್ಚಳವಿದ್ದರೂ ದರ ಸ್ಥಿರತೆಯನ್ನು ಕಾಯ್ದುಕೊಂಡಿದ್ದು ರೈತರಿಗೆ ಉತ್ತಮ ದರ ಲಭಿಸುತ್ತಿದೆಯೆನ್ನಲಾಗಿದೆ. ಆವಕ ಉತ್ತಮವಿದ್ದರೂ ಗುಣಮಟ್ಟದ ಮೆಣಸಿನಕಾಯಿ ಉತ್ತಮ ದರಕ್ಕೆ ಮಾರಾಟವಾಗುತ್ತಿದೆಯೆನ್ನಲಾಗಿದ್ದು ಈಗ ಹೆಚ್ಚಿನ ಬೇಡಿಕೆಯಿಂದ ಉತ್ತಮ ದರ ಮುಂದುವರಿಯುವ ಸಾಧ್ಯತೆಯಿದೆ.

### ಕಚ್ಚಾ ಗೋಡಂಬಿ ಆವಕ ಆರಂಭವಾಗುತ್ತಿದ್ದು ದರ ಇಳಿಕೆ

ಆಮದು ಕಚ್ಚಾ ಗೋಡಂಬಿ ದರ ಹೆಚ್ಚಳವಿದ್ದಾಗ್ಯೂ ಸ್ಥಳೀಯ ಕಚ್ಚಾ ಗೋಡಂಬಿ ದರ ಇಳಿಕೆಯಿರುವುದು ರೈತರಿಗೆ ಬೇಸರವುಂಟಾಗಿದೆಯೆನ್ನಲಾಗಿದೆ. ದರ ಇಳಿಕೆಯಿರುವುದು ಕಚ್ಚಾ ಗೋಡಂಬಿ ಉತ್ಪಾದನೆಗೆ ಮುಂಬರುವ ವರ್ಷಗಳಲ್ಲೆ ಹಿನ್ನಡೆಯಾಗುವ ಸಂಭವವಿದೆ. ಜಾಗತಿಕವಾಗಿ ಸಾಕಷ್ಟು ಕಚ್ಚಾ ಗೋಡಂಬಿಯ ಲಭ್ಯತೆ ಈ ವರ್ಷ ದರ ಹೆಚ್ಚಳವಾಗುವ ಸಂಭವ ಕಡಿಮೆ. ಗೋಡಂಬಿ ತಿರುಳಿಗೆ ಬೇಡಿಕೆ ಹೆಚ್ಚಾಗಿ, ದರ ಹೆಚ್ಚಳವಾದಲ್ಲಿ ಮಾತ್ರ ಕಚ್ಚಾ ಗೋಡಂಬಿ ದರ ಹೆಚ್ಚಳವಾಗುವ ಸಾಧ್ಯತೆಯಿದೆ. ಆದರೂ ಜಾಗತಿಕವಾಗಿ ಉತ್ತಮ ಬೆಳೆಯ ಉತ್ಪಾದನೆ ಇರುವುದರಿಂದ ಕಚ್ಚಾ ಗೋಡಂಬಿ ದರ ಹೆಚ್ಚಳವಾಗುವ ಸಾಧ್ಯತೆ ಕಡಿಮೆ.

### ಕಚ್ಚಾ ಪಾಮೆಣ್ಣೆ ಮೇಲಿನ ಎಗ್ರಿಸೆಸ್ 7.5 ಶೇಕಡಾದಿಂದ 5 ಶೇಕಡಾಕ್ಕೆ ಇಳಿಕೆ

ಫೆ, 12, 2022 ರಿಂದ ಕೇಂದ್ರ ಸರಕಾರ ಕಚ್ಚಾ ಪಾಮೆಣ್ಣೆ ಮೇಲಿನ ಎಗ್ರಿಸೆಸ್ 7.5 ಶೇಕಡಾದಿಂದ 5 ಶೇಕಡಾಕ್ಕೆ ಇಳಿಸಿದೆಯೆನ್ನಲಾಗಿದೆ. ಜನವರಿ 2022 ರ ಭಾರತದ ಸಸ್ಯಜನ್ಯ ತೈಲ ಆಮದು 16 ಶೇಕಡಾ ಹೆಚ್ಚಳವಾಗಿ 12.70 ಲಕ್ಷ ಟನ್ ಗಳಾಗಿದೆಯೆನ್ನಲಾಗಿದೆ. ಭಾರತ ಪಾಮೆಣ್ಣೆ ಆಮದು 2021 ಜನವರಿಯಲ್ಲಿದ್ದು 780,741 ಟನ್‌ಗಳಿಂದ 29 ಶೇಕಡಾ ಇಳಿಕೆಯಾಗಿ 2022 ಜನವರಿಯಲ್ಲಿ 553,084 ಟನ್ ಗಳಾಗಿವೆಯೆಂದು ಸಾಲ್ವೆಂಟ್ಸ್ ಎಕ್ಸ್ ಟ್ರಾಕ್ಟರ್ಸ್ ಅಸೋಸಿಯೇಶನ್ (SÉA) ಹೇಳಿಕೆಯೆನ್ನಲಾಗಿದೆ.ಜ